# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ 583276

ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ, ಕರ್ನಾಟಕ


**ಕುಲಸಚಿವರು**

**ವಿಷಯ** : 2024–25ನೇ ಸಾಲಿನ ಪಿಎಚ್.ಡಿ. ಪ್ರವೇಶ ಅವದಿ ವಿಸ್ತರಿಸಿರುವ ಕುರಿತು

**ಉಲ್ಲೇಖ** :1. ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಾವಳಿ

2. ಶೈಕ್ಷಣಿಕ ವಿಭಾಗದ ಕಡತ ಸಂಖ್ಯೆ:ಕವಿಹಂ:ನಿಶೈ:2050:ಪಿಎಚ್.ಡಿ:ಪ್ರವೇಶ:2024–25ರ ಕಂಡಿಕೆ 05, ದಿನಾಂಕ:26.12.2024ರಂದು ಮಾನ್ಯ ಕುಲಪತಿಗಳು ನೀಡಿರುವ ಅನುಮೋದನೆ.

3. ಶೈಕ್ಷಣಿಕ ವಿಭಾಗದ ಕಡತ ಸಂಖ್ಯೆ:ಕವಿಹಂ:ನಿಶೈ:2050:ಪಿಎಚ್.ಡಿ:ಪ್ರವೇಶ:2024–25ರ ಕಂಡಿಕೆ 11, ದಿನಾಂಕ:21.01.2025ರಂದು ಮಾನ್ಯ ಕುಲಪತಿಗಳು ನೀಡಿರುವ ಅನುಮೋದನೆ.

* * *

**ಪ್ರಸ್ತಾವನೆ**

ಕನ್ನಡ ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳು ಮತ್ತು ಮಾನ್ಯತಾ ಕೇಂದ್ರಗಳಲ್ಲಿ ರಿಕ್ತವಿರುವ ಪಿಎಚ್.ಡಿ. ಸ್ಥಾನಗಳಿಗೆ 2024–25ನೇ ಸಾಲಿನ ಉಲ್ಲೇಖ 01ರ ಪಿಎಚ್.ಡಿ. ನಿಯಮಾವಳಿಗಳ ಅನುಸಾರ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲು, ಉಲ್ಲೇಖ 02ರ ಕಡತದಲ್ಲಿ ಮಾನ್ಯ ಕುಲಪತಿಯವರು ಆಡಳಿತಾತ್ಮಕ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಪಿಎಚ್.ಡಿ. ಕೋರ್ಸ್‌ಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಉಲ್ಲೇಖ 03ರಲ್ಲಿ ಮಾನ್ಯ ಕುಲಪತಿಯವರು ಅವದಿ ವಿಸ್ತರಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಅರ್ಜಿ ಸಲ್ಲಿಸಲು ಅವದಿಯನ್ನು ವಿಸ್ತರಿಸಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸಂಖ್ಯೆ:ಕವಿಹಂ:ಕುಸ:02:ನಿಶೈ:ಪಿಎಚ್.ಡಿ.:ಪ್ರವೇಶ:ಅಧಿಸೂಚನೆ:2024–25 ದಿನಾಂಕ:21.01.2025

## ಪರಿಷ್ಕೃತ ಅಧಿಸೂಚನೆ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕನ್ನಡ ವಿಶ್ವವಿದ್ಯಾಲಯ ವಿವಿಧ ಅಧ್ಯಯನ ವಿಭಾಗಗಳು ಹಾಗೂ ಮಾನ್ಯತಾ ಕೇಂದ್ರಗಳಲ್ಲಿ ರಿಕ್ತವಿರುವ ಪಿಎಚ್.ಡಿ. ಸ್ಥಾನಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅವದಿ ವಿಸ್ತರಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಈ ಕೆಳಗಿನಂತೆ ಅರ್ಜಿಗಳನ್ನು ಸಲ್ಲಿಸಬಹುದು.

**ದಿನಾಂಕ:27.01.2025ವರೆಗೆ ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬಹುದು.**

ಅರ್ಜಿ ಶುಲ್ಕ ರೂ.1,000/– (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಹಾಗೂ ಪ್ರವರ್ಗ 1ರ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ಶೇ.50ರಷ್ಟು ವಿನಾಯಿತಿ ಇರುತ್ತದೆ.)

ದಂಡ ಶುಲ್ಕ ರೂ.500/– (ಅರ್ಜಿ ಶುಲ್ಕ ರೂ.1,000/– ಮತ್ತು ದಂಡ ಶುಲ್ಕ ರೂ.500/– ಒಟ್ಟು ರೂ.1,500/–)

ಹೆಚ್ಚಿನ ವಿವರಗಳಿಗಾಗಿ ಕನ್ನಡ ವಿಶ್ವವಿದ್ಯಾಲಯದ ವೆಬ್‌ಜಾಲತಾಣ www.kannadauniversity.com ಸಂಪರ್ಕಿಸಬಹುದು.

ಆದೇಶದ ಮೇರೆಗೆ,

ಕುಲಸಚಿವರು 21.1.25

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-583276

**ಇವರಿಗೆ,**

ಎಲ್ಲಾ ಅಧ್ಯಯನ ವಿಭಾಗಗಳು, ವಿಸ್ತರಣಾ ಕೇಂದ್ರಗಳು ಹಾಗೂ ಮಾನ್ಯತಾ ಸಂಸ್ಥೆಗಳಿಗೆ

**ಪ್ರತಿಗಳು**

1. ಮಾನ್ಯ ಕುಲಪತಿಯವರ ಆಪ್ತಶಾಖೆ, ಕವಿಹಂ.
2. ಹಣಕಾಸು ಅಧಿಕಾರಿಗಳು, ಕವಿಹಂ.
3. ನಿರ್ದೇಶಕರು, ಶೈಕ್ಷಣಿಕ, ಕವಿಹಂ
4. ನಿರ್ದೇಶಕರು, ಅಧ್ಯಯನಾಂಗ, ಕವಿಹಂ.
5. ನಿರ್ದೇಶಕರು, ಐಕ್ಯೂಎಸಿ ಘಟಕ, ಕವಿಹಂ
6. ಉಪನಿರ್ದೇಶಕರು, ಮಾಹಿತಿ ಕೇಂದ್ರ, ಕವಿಹಂ.
7. ಸಹಾಯಕ ನಿರ್ದೇಶಕರು, ದರ್ಪಣ ಗಣಕಕೇಂದ್ರ, ಕವಿಹಂ
8. ಕಚೇರಿ ಪ್ರತಿ

ದೂರವಾಣಿ ಮತ್ತು ಫ್ಯಾಕ್ಸ್ : 08394–241335, ಇ.ಮೇಲ್ : kannadauniversity@gmail.com

ಶೈಕ್ಷಣಿಕ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - 583 276

## (ಪಿಎಚ್.ಡಿ. ಪ್ರವೇಶ 2024-25)

## ಪರಿಷ್ಕೃತ ಪಿಎಚ್.ಡಿ. ಪ್ರವೇಶ ವೇಳಾಪಟ್ಟಿ

| ಕ್ರ.ಸಂ. | ವಿವರ | ಅವಧಿ/ದಿನಾಂಕ |
|---|---|---|
| 1. | ಶೈಕ್ಷಣಿಕ ವಿಭಾಗದಿಂದ ಅರ್ಜಿ ನೀಡಿಕೆ ಆರಂಭ | 20.12.2024 |
| 2. | ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 15.01.2025 |
| 3. | ದಂಡ ಶುಲ್ಕ (ಜಿಎಸ್‌ಟಿ ಸಹಿತ) ರೂ. 500/-ಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 20.01.2025 |
| 4. | ದಂಡ ಶುಲ್ಕದೊಂದಿಗೆ ಅವದಿ ವಿಸ್ತರಣೆ | 27.01.2025 |
| 5. | ಪ್ರವೇಶ ಪರೀಕ್ಷೆ ಬರೆಯಲು ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು |
| 6. | ಪ್ರವೇಶ ಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆ ದಿನಾಂಕ | ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು |
| 7. | ಆಯ್ಕೆ ಪಟ್ಟಿ ಪ್ರಕಟಣಾ ದಿನಾಂಕ | ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು |
| 8. | ನೋಂದಣಿಗೆ ಕೊನೆಯ ದಿನಾಂಕ | ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು |
| 9. | ದಂಡ ಶುಲ್ಕದೊಂದಿಗೆ ನೋಂದಣಿಗೆ ಕೊನೆಯ ದಿನಾಂಕ | ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು |

1. **(ಅ) ಪ್ರವೇಶ ಅರ್ಜಿ ಶುಲ್ಕ: ರೂ. 1,000.00** (ಜಿ.ಎಸ್.ಟಿ. ಸಹಿತ)
   **(ಆ) ದಂಡ ಶುಲ್ಕ ರೂ.500.00** (ಜಿ.ಎಸ್.ಟಿ. ಸಹಿತ)
   **(ಪ.ಜಾ/ಪ.ಪಂ. ಹಾಗೂ ಪ್ರ-1ರ ವಿದ್ಯಾರ್ಥಿಗಳಿಗೆ ವಿನಾಯಿತಿ ಶೇ.50% ಇರುತ್ತದೆ.) ಕೇಂದ್ರ/ರಾಜ್ಯ ಸರ್ಕಾರ/ನಿಗಮ/ಮಂಡಳಿಗಳಲ್ಲಿ ಖಾಯಂ ನೇಮಕಾತಿಗೊಂಡು ಸೇವೆಯಲ್ಲಿರುವ ಸಿಬ್ಬಂದಿಗಳಿಗೆ ಯಾವುದೇ ವಿನಾಯಿತಿ ಇರುವುದಿಲ್ಲ.**

2. **(ಅ) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.01.2025**
   **(ಆ) ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:20.01.2025**
   **(ಇ) ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಅವದಿ ವಿಸ್ತರಿಸಿದ ಕೊನೆಯ ದಿನಾಂಕ:27.01.2025**

3. **ಪ್ರವೇಶ ಅರ್ಹತೆ:** ಪಿಎಚ್.ಡಿ. ನಿಯಮಾವಳಿ.

3.1 ವಿದೇಶಿ ವಿದ್ಯಾರ್ಥಿಗಳು (ಸಂಬಂಧಿಸಿದ ರಾಯಭಾರಿ ಕಛೇರಿಯಿಂದ ಪ್ರಾಯೋಜಿತ) ಮತ್ತು ಪ್ರಾಯೋಜಿತ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಅಂಗೀಕೃತ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ.55 ಅಂಕ ಪಡೆದ ವಿದ್ಯಾರ್ಥಿಗಳು ಪಿಎಚ್.ಡಿ. ಅಧ್ಯಯನಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

3.2 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1/ಅಂಗವಿಕಲ ವಿದ್ಯಾರ್ಥಿಗಳು ಮತ್ತು ಮಾರ್ಚ್ 31, 1992ರ ಪೂರ್ವದಲ್ಲಿ ಖಾಯಂ ಆಗಿ ನಿಯಮಾನುಸಾರ ನೇಮಕಗೊಂಡು ಪದವಿ ಕಾಲೇಜು ಹಾಗೂ ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರು, ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಸಿಬ್ಬಂದಿ ಕನಿಷ್ಠ 50 ಅಂಕಗಳನ್ನು ಸ್ನಾತಕೋತ್ತರ ಪದವಿಯಲ್ಲಿ ಪಡೆದಿದ್ದರೆ ಪಿಎಚ್.ಡಿ. ಅಧ್ಯಯನಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆದರೆ ಅರ್ಜಿ ಸಲ್ಲಿಸುವಂತಹ ನೌಕರರು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸೇವೆಯಲ್ಲಿರುವುದು ಕಡ್ಡಾಯ.

3.3 ಸ್ನಾತಕೋತ್ತರ ಪದವಿಯ ಫಲಿತಾಂಶವನ್ನು ವಿದ್ಯಾರ್ಥಿಯ ಅಂಕಪಟ್ಟಿಯಲ್ಲಿ ಗ್ರೇಡ್/ಕ್ರೆಡಿಟ್ಸ್/ಸಂಗ್ರಹಿತ ಬಿಂದುಗಳ ರೂಪದ ಮೂಲಕ ಘೋಷಣೆ ಮಾಡಿದ್ದರೆ ಅದನ್ನು ಶೇಕಡಾವಾರು ಅಂಕಕ್ಕೆ ಪರಿವರ್ತಿಸಿಕೊಂಡು ನಿಯಮ 1 ಮತ್ತು 2ರನ್ವಯ ಪ್ರವೇಶದ ಅರ್ಹತೆಯನ್ನು ನಿರ್ಧರಿಸಬೇಕು.

3.4 ಯು.ಜಿ.ಸಿ/ಎಫ್.ಐ.ಪಿ/ರಾಜೀವ್‌ಗಾಂಧಿ ಶಿಷ್ಯವೇತನ ಯೋಜನೆಯಡಿಯಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅರ್ಜಿ ಸಲ್ಲಿಸುವವರು ವಿಶ್ವವಿದ್ಯಾಲಯದ ಕುಲಸಚಿವರ ಮುಖಾಂತರ ಅರ್ಜಿ ಸಲ್ಲಿಸುವುದು. ಯು.ಜಿ.ಸಿ.ಯಿಂದ ಪರವಾನಿಗೆ ಬಂದ ನಂತರ ಕುಲಸಚಿವರಲ್ಲಿ ವರದಿ ಮಾಡಿಕೊಂಡು ಸಂಬಂಧಿಸಿದ ವಿಭಾಗದಲ್ಲಿ ಅಧ್ಯಯನ ಮುಂದುವರಿಸುವುದು. ಯಥಾಸ್ಥಿತಿ ಉಳಿದ ವಿದ್ಯಾರ್ಥಿಗಳಂತೆ ಪ್ರಗತಿ ಪರಿಶೀಲನೆಯಂತಹ ಶೈಕ್ಷಣಿಕ ನಿಯಮಗಳು ಅನ್ವಯಿಸುತ್ತವೆ.

3.5 ಪ್ರವೇಶ (ನೋಂದಣಿ) ಸಂದರ್ಭದಲ್ಲಿ ವಿದ್ಯಾರ್ಥಿಯು ಮತ್ತು ಪಾಲಕರು/ಪೋಷಕರ ದೃಢೀಕರಣ ಪತ್ರವನ್ನು ನೀಡುವುದು ಕಡ್ಡಾಯ.

**4. ಪ್ರವೇಶ ಅರ್ಜಿ ಶುಲ್ಕ ಪಾವತಿ:**

4.1 ವಿದ್ಯಾರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ಹಣಕಾಸು ವಿಭಾಗದಲ್ಲಿ ಶುಲ್ಕ ಪಾವತಿಸಿ ರಸೀದಿ ಪಡೆದು ಶೈಕ್ಷಣಿಕ ವಿಭಾಗದಿಂದ ಅರ್ಜಿಯನ್ನು ಪಡೆಯುವುದು

**ಅಥವಾ**

4.2 ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ **www.kannadauniversity.org** ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿ, **ಭರ್ತಿಮಾಡಿದ** ಅರ್ಜಿ ಮತ್ತು ಅರ್ಜಿ ಶುಲ್ಕದ ಡಿ.ಡಿ.ಯನ್ನು **ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ** ಇವರ ಹೆಸರಿನಲ್ಲಿ (**ಹೊಸಪೇಟೆಯ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಅಥವಾ ಬ್ಯಾಂಕ್ ಆಫ್ ಇಂಡಿಯಾ, ಕಮಲಾಪುರ, ವಿಜಯನಗರ ಜಿಲ್ಲೆ, ಇಲ್ಲಿ ಪಾವತಿಯಾಗುವಂತೆ**) ಪಡೆದು, **ನಿರ್ದೇಶಕರು, ಶೈಕ್ಷಣಿಕ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583276,** ಇವರಿಗೆ **ದಿನಾಂಕ:27.01.2025**ರ ಒಳಗಾಗಿ ಸಲ್ಲಿಸಬೇಕು.

**ಸೂಚನೆಗಳು :**

1. 371(ಜೆ) ಅನ್ವಯ ಮೀಸಲಾತಿ ಬಯಸುವವರು ಅಗತ್ಯ ದಾಖಲೆಗಳನ್ನು ಒದಗಿಸುವುದು.
2. ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ದಾಖಲಿಸಿ ದಾಖಲೆ ಲಗತ್ತಿಸುವುದು.
3. ಇ-ಮೇಲ್ ಐಡಿ ಹಾಗೂ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ದಾಖಲಿಸುವುದು.
4. ಕನ್ನಡ ವಿಶ್ವವಿದ್ಯಾಲಯದ ಆವರಣ, ವಿಸ್ತರಣಾ ಕೇಂದ್ರಗಳು ಮತ್ತು ಮಾನ್ಯತಾ ಕೇಂದ್ರಗಳಲ್ಲಿ ಲಭ್ಯವಿರುವ ಆಯಾ ವಿಷಯದ ಮಾರ್ಗದರ್ಶಕರಿಗೆ ಇರುವ ಖಾಲಿ ಪಿಎಚ್.ಡಿ. ಸ್ಥಾನಗಳಿಗೆ ಅನುಗುಣವಾಗಿ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗುವುದು. ಅಂತಿಮ ನಿರ್ಧಾರ ಕನ್ನಡ ವಿಶ್ವವಿದ್ಯಾಲಯದ್ದಾಗಿರುತ್ತದೆ.
5. 371(ಜೆ) ಮೀಸಲಾತಿ ನಿಯಮಗಳನ್ನು ಗಮನದಲ್ಲಿರಿಸಿಕೊಂಡು ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು.

ಪ್ರವೇಶ ಪರೀಕ್ಷೆ, ಫಲಿತಾಂಶ ಮತ್ತು ಆಯ್ಕೆಪಟ್ಟಿ ಪ್ರಕಟಣೆ ಹಾಗೂ ಹೆಚ್ಚಿನ ವಿವರಗಳಿಗೆ **ಕನ್ನಡ ವಿಶ್ವವಿದ್ಯಾಲಯದ www.kannadauniversity.org ವೆಬ್‌ಸೈಟ್ ಅಥವಾ ಶೈಕ್ಷಣಿಕ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583276,** ಯಾವುದೇ ಪತ್ರವ್ಯವಹಾರಕ್ಕೆ ಅವಕಾಶ ಇರುವುದಿಲ್ಲ.

ಡಿ.ಡಿ. ಮೂಲಕ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು, ಡಿ.ಡಿ. ಹಿಂಬದಿಯಲ್ಲಿ ಹೆಸರು, ವಿಳಾಸ, ಅರ್ಜಿ ಸಲ್ಲಿಸುವ ವಿಭಾಗ/ಮಾನ್ಯತಾ ಕೇಂದ್ರದ ಹೆಸರು ಮತ್ತು ವಿಷಯವನ್ನು ಬರೆಯಿರಿ.

ಮಾನ್ಯತಾ ಕೇಂದ್ರಗಳಿಗೆ ಅರ್ಜಿ ಸಲ್ಲಿಸಬಯಸುವ ವಿದ್ಯಾರ್ಥಿಗಳು ಭರ್ತಿಮಾಡಿದ ಅರ್ಜಿಗಳನ್ನು ನಿರ್ದೇಶಕರು, ಶೈಕ್ಷಣಿಕ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583276 ಇವರಿಗೆ ಅಥವಾ ಸಂಬಂಧಿಸಿದ ಮಾನ್ಯತಾ ಕೇಂದ್ರಗಳ ಸಂಯೋಜನಾಧಿಕಾರಿಗಳಿಗೆ ಸಲ್ಲಿಸಬಹುದು.

2n/01/2024

**ನಿರ್ದೇಶಕರು, ಶೈಕ್ಷಣಿಕ**

ನಿರ್ದೇಶಕರು
ಶೈಕ್ಷಣಿಕ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬